# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 281 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 06/07/2023 |
| ಉತ್ತರಿಸುವ ಸಚಿವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಹಲವಾರು ಸಂಘ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವ ನೌಕರರು ನಾನಾ ಬೇಡಿಕೆಗಳ ಈಡೇರಿಕೆಗಾಗಿ ಮುಷ್ಕರದಲ್ಲಿ ಪಾಲ್ಗೊಂಡ ಸಂದರ್ಭದಲ್ಲಿ ನೌಕರರ ಮೇಲೆ ಕಠೋರ ಶಿಸ್ತಿನ ಕ್ರಮ ಕೈಗೊಂಡು ಶಿಕ್ಷಿಸಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹೌದಾದಲ್ಲಿ ನೌಕರರ ಬೇಡಿಕೆಗಳು ನ್ಯಾಯಯುತವಾಗಿದ್ದರೂ ಆಡಳಿತ ಮಂಡಳಿ ನಿರ್ದಾಕ್ಷಿಣ್ಯವಾಗಿ ಶಿಸ್ತಿನ ಕ್ರಮ ಕೈಗೊಳ್ಳುತ್ತಿದ್ದು, ಇದರಿಂದ ನೌಕರರು ಆರ್ಥಿಕವಾಗಿ ತೀವ್ರ ಸಂಕಷ್ಟಕ್ಕೆ ಒಳಗಾಗಿದ್ದು, ಸರ್ಕಾರವು ಮಧ್ಯ ಪ್ರವೇಶಿಸಿ ಸಮಸ್ಯೆ ಬಗೆಹರಿಸಲು ಕೈಗೊಂಡ ಕ್ರಮಗಳೇನು; | ಹಲವಾರು ಸಂಘ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವ ನೌಕರರು ನಾನಾ ಬೇಡಿಕೆಗಳ ಈಡೇರಿಕೆಗಾಗಿ ಮುಷ್ಕರದಲ್ಲಿ ಪಾಲ್ಗೊಂಡ ಸಂದರ್ಭದಲ್ಲಿ ನೌಕರರ ಮೇಲೆ ಕಠೋರ ಶಿಸ್ತಿನ ಕ್ರಮ ಕೈಗೊಂಡು ಶಿಕ್ಷಿಸಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಅಂತಹ ಪ್ರಕರಣಗಳಲ್ಲಿ 1947ರ ಕೈಗಾರಿಕಾ ವಿವಾದ ಕಾಯ್ದೆಯಡಿ ನೋಂದಾಯಿಸಿ, ಸಂಧಾನ ಸಭೆಗಳನ್ನು ನಡೆಸಲಾಗುತ್ತದೆ. ಸಂಧಾನದಲ್ಲಿ ಒಪ್ಪಂದಕ್ಕೆ ಬರುವ ಪ್ರಕರಣಗಳಲ್ಲಿ ಒಪ್ಪಂದವನ್ನು ಏರ್ಪಡಿಸಲಾಗುತ್ತದೆ. ಒಪ್ಪಂದಕ್ಕೆ ಬರದ ಪ್ರಕರಣಗಳನ್ನು ವಿಫಲತೆಯಲ್ಲಿ ಮುಕ್ತಾಯಗೊಳಿಸಿ ನ್ಯಾಯ ನಿರ್ಣಯಕ್ಕಾಗಿ ಕಾರ್ಮಿಕ ನ್ಯಾಯಾಲಯ/ ಔದ್ಯಮಿಕ ನ್ಯಾಯಾಧಿಕರಣಕ್ಕೆ ವರ್ಗಾಯಿಸಲಾಗಿರುತ್ತದೆ. |
| ಆ) | ಸಾರಿಗೆ ಸಂಸ್ಥೆಗಳಲ್ಲಿ ದಿನಾಂಕ:07-04-2021 ರಿಂದ 21-04-2021ರವರೆಗೆ ವೇತನ ಪರಿಷ್ಕರಣೆಗಾಗಿ ನಡೆದ ಮುಷ್ಕರದಲ್ಲಿ ಪಾಲ್ಗೊಂಡ ಹಲವು ನೌಕರರನ್ನು ವಜಾ/ಅಮಾನತ್ತುಗೊಳಿಸಿದೆ ಹಾಗೂ ಕೆಲವರ ಡ್ಯೂಟಿ-ಸ್ವಾಪ್ ಮಾಡಲಾಗಿದ್ದು, ಇದರಿಂದ ಆ ನೌಕರರು ಮತ್ತು ಅವರ ಕುಟುಂಬದ ಪರಿಸ್ಥಿತಿ ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿದೆ.<br><br>ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ ಕಾರ್ಮಿಕ ಹಿತಾಸಕ್ತಿ ಕಾಪಾಡಲು ಸರ್ಕಾರ ಕೈಗೊಂಡ ಕ್ರಮಗಳು ಈ ಕೆಳಕಂಡಂತಿದೆ:-<br>**ಕ.ರಾ.ರ.ಸಾ.ನಿಗಮ:**<br>ನಿಗಮದ ವಿಭಾಗಗಳಲ್ಲಿ ಒಟ್ಟು 324 ತರಬೇತಿ ನೌಕರರನ್ನು ಮುಷ್ಕರ ಸಂದರ್ಭದಲ್ಲಿ ಆಯ್ಕೆ ಪಟ್ಟಿಯಿಂದ ತೆಗೆದು ಹಾಕಲಾಗಿರುತ್ತದೆ. ಈ ಪೈಕಿ ದಯಾಯಾಚನಾ ಮನವಿಗಳ ಮೂಲಕ 155 ತರಬೇತಿ ನೌಕರರನ್ನು ಆಯ್ಕೆಪಟ್ಟಿಗೆ ಮರು ನೇಮಕ ಮಾಡಲಾಗಿರುತ್ತದೆ. |

ಇ) ನ್ಯಾಯಾಲಯದಲ್ಲಿರುವ ಮೊಕದ್ದಮೆಗಳನ್ನು ಇತ್ಯರ್ಥಗೊಳಿಸಿ ಕಾರ್ಮಿಕರ ಹಿತಾಸಕ್ತಿ ಕಾಪಾಡಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)

ನಿಗಮದಲ್ಲಿ ಮುಷ್ಕರದಲ್ಲಿ ಭಾಗಿಯಾದ ಕುರಿತು ಯಾವುದೇ ಖಾಯಂ ನೌಕರರನ್ನು ಸೇವೆಯಿಂದ ವಜಾಗೊಳಿಸಿರುವುದಿಲ್ಲ. ಆದರೆ ಮುಷ್ಕರದ ಸಮಯದಲ್ಲಿ ಅನ್ಯ ಕಾರಣಗಳ ಮೇರೆಗೆ 74 ನೌಕರರುಗಳನ್ನು ಸೇವೆಯಿಂದ ವಜಾಗೊಳಿಸಿದ್ದು, ಸದರಿ ನೌಕರರ ಪೈಕಿ ಮೇಲ್ಮನವಿ ಪ್ರಾಧಿಕಾರಸ್ಥರುಗಳು ಮತ್ತು ಸ್ವಯಂ ಪರಿಶೀಲನಾ ಪ್ರಾಧಿಕಾರಸ್ಥರುಗಳ ಆದೇಶಗಳನ್ವಯ 22 ಜನ ನೌಕರರುಗಳನ್ನು ಮರುನೇಮಕ ಮಾಡಲಾಗಿರುತ್ತದೆ.

**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ**

| ಅಂಶಗಳು | ಸಂಖ್ಯೆ |
|---|---|
| ಮುಷ್ಕರದ ಅವಧಿಯಲ್ಲಿ ವಜಾಗೊಂಡಿರುವ ನೌಕರರು | 1354 |
| ಅಪೀಲ್/ಮಾನ್ಯ ನ್ಯಾಯಾಲಯ / ಲೋಕ್ ಅದಾಲತ್ ಮುಖಾಂತರ ಪುನರ್ ನೇಮಕ | 790 |
| ಮಧ್ಯಂತರ ಆದೇಶದ ಮೇರೆಗ ಪುನರ್ ನೇಮಕ: | 278 |
| ಒಟ್ಟು ಪುನರ್ ನೇಮಕ: | 1068 |
| ಪುನರ್ ನೇಮಕಕ್ಕಾಗಿ ನ್ಯಾಯಾಲಯದಲ್ಲಿ ಬಾಕಿ ಇರುವ ಮೊಕದ್ದಮೆ/ನೌಕರರ ಸಂಖ್ಯೆ | 146 |

**ವಾ.ಕ.ರ.ಸಾ.ಸಂಸ್ಥೆ:**

ಸಂಸ್ಥೆಯಲ್ಲಿ ಒಟ್ಟು 336 ಸಿಬ್ಬಂದಿಗಳು ವಜಾ, ಸೇವೆಯಿಂದ ಬಿಡುಗಡೆ ಹಾಗೂ ಆಯ್ಕೆ ಪಟ್ಟಿಯಿಂದ ತೆಗೆದುಹಾಕಲಾಗಿದೆ. ಮುಂದುವರೆದಂತೆ ಈ ರೀತಿಯಲ್ಲಿ ವಜಾ, ಸೇವೆಯಿಂದ ಬಿಡುಗಡೆ ಹಾಗೂ ಆಯ್ಕೆಪಟ್ಟಿಯಿಂದ ತೆಗೆದುಹಾಕಲಾದ ಸಿಬ್ಬಂದಿಗಳಲ್ಲಿ 310 ಸಿಬ್ಬಂದಿಗಳು ಮೇಲ್ಮನವಿ ಸಲ್ಲಿಸಿದ್ದು, ಇದರಲ್ಲಿ 292 ಮೇಲ್ಮನವಿ ಪ್ರಕರಣಗಳಲ್ಲಿ ನಿಯಮಾವಳಿಗಳನ್ವಯ ಮತ್ತು ಪ್ರಕರಣದ ಅರ್ಹತೆಯ ಮೇಲೆ (on merits of the case) ಈಗಾಗಲೇ ಸದರಿ ಸಿಬ್ಬಂದಿಗಳನ್ನು ಸೇವೆಯಲ್ಲಿ ಮರು ನೇಮಕಗೊಳಿಸಲಾಗಿದೆ. ಪ್ರತಿಭಟನೆಯಲ್ಲಿ ಪಾಲ್ಗೊಂಡು, ಕರ್ತವ್ಯ ನಿರತ ಚಾಲಕನ ಸಾವಿಗೆ ಕಾರಣರಾಗಿರುವ ಹಾಗೂ ಅನ್ಯ ಕಾರಣಗಳ ಮೇಲೆ ಈ ಹಿಂದಿನ ಪ್ರಕರಣಗಳಲ್ಲಿ ವಿಚಾರಣೆ ಕೈಗೊಂಡು ವಜಾಗೊಳಿಸಿದ 18 ಸಿಬ್ಬಂದಿಗಳಿಗೆ ಸಂಬಂಧಿಸಿದ ಮೇಲ್ಮನವಿಗಳನ್ನು ಪ್ರಕರಣದ ಗಂಭೀರತೆಯನುಸಾರ ಪರಿಗಣಿಸಿರುವುದಿಲ್ಲ. ಉಳಿದ 27 ಸಿಬ್ಬಂದಿಗಳು ಮೇಲ್ಮನವಿಗಳನ್ನು ಸಲ್ಲಿಸಿರುವುದಿಲ್ಲ.

| | | |
|---|---|---|
| | | **ಕ.ಕ.ರಾ.ಸಾ.ನಿಗಮ:**<br>ನಿಗಮದಲ್ಲಿ ಒಟ್ಟು 60 ಜನ ಖಾಯಂ ನೌಕರರನ್ನು ವಜಾಗೊಳಿಸಿದ್ದು, ಅದರಂತೆ 21 ಜನ ತರಬೇತಿ ನೌಕರರನ್ನು ಆಯ್ಕೆಪಟ್ಟಿಯಿಂದ ತೆಗೆದುಹಾಕಲಾಗಿದ್ದು, ಒಟ್ಟು ಸಂಸ್ಥೆಯ ಸೇವೆಯಿಂದ ವಜಾಗೊಂಡ/ಆಯ್ಕೆ ಪಟ್ಟಿಯಿಂದ ತೆಗೆದುಹಾಕಲಾದ 81 ಜನರ ಪೈಕಿ, 60 ಜನ ಖಾಯಂ/ತರಬೇತಿ ನೌಕರರು ಮೇಲ್ಮನವಿ/ ದಯಾಯಾಚನಾ ಮನವಿಯನ್ನು ಸಲ್ಲಿಸಿದ್ದು, ಮೇಲ್ಮನವಿ ಪ್ರಾಧಿಕಾರಸ್ಥರು/ ಸೂಕ್ತಾಧಿಕಾರಿಗಳು ಪ್ರತಿಯೊಂದು ಪ್ರಕರಣಗಳನ್ನು ಅವಲೋಕನ ಮಾಡಿ, ಆಪಾದನೆಗಳು ಗಂಭೀರ ಸ್ವರೂಪದ್ದು ಎಂದು ದೃಢಪಟ್ಟಿರುವುದರಿಂದ ಅವರುಗಳ ಪೈಕಿ 47 ನೌಕರರ (ಖಾಯಂ & ತರಬೇತಿ ನೌಕರರ) ಮೇಲ್ಮನವಿ/ ದಯಾಯಾಚನಾ ಮನವಿಗಳನ್ನು ತಿರಸ್ಕರಿಸಲಾಗಿದೆ. 13 ಖಾಯಂ/ ತರಬೇತಿ ನೌಕರರ ಮನವಿಯನ್ನು ಅಂಗೀಕರಿಸಿ ಸೇವೆಗೆ ಪುನರ್ ಸೇರ್ಪಡೆಗೊಳಿಸಲಾಗಿದೆ. ಉಳಿದ 21 ಖಾಯಂ/ ತರಬೇತಿ ನೌಕರರು ಮೇಲ್ಮನವಿ/ ದಯಾಯಾಚನಾ ಮನವಿಯನ್ನು ಸಲ್ಲಿಸಿರುವುದಿಲ್ಲ.<br><br>ಮುಂದುವರೆದು, 35 ಜನ ನೌಕರರು ಮಾನ್ಯ ನ್ಯಾಯಾಲಯದಲ್ಲಿ ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಸರ್ಕಾರದ ಆದೇಶದನುಸಾರ ಮಾನ್ಯ ನ್ಯಾಯಾಲಯದಲ್ಲಿ ದಾವೆ ಹೂಡಿದ ಒಟ್ಟು 35 ಪ್ರಕರಣಗಳ ಪೈಕಿ 27 ಪ್ರಕರಣಗಳಲ್ಲಿ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಿಕೊಳ್ಳಲಾಗಿರುತ್ತದೆ.<br><br>ಒಟ್ಟಾರೆ, ವಜಾಗೊಂಡ/ ಆಯ್ಕೆ ಪಟ್ಟಿಯಿಂದ ತೆಗೆದುಹಾಕಲಾದ ಒಟ್ಟು 81 ಜನ ನೌಕರರ ಪೈಕಿ 40 ನೌಕರರನ್ನು ಹಿಂಪಡೆಯಲಾಗಿದ್ದು, ಇವರು ಕಾರ್ಯನಿರ್ವಹಿಸುತ್ತಿದ್ದಾರೆ. |

**ಕಾಇ 285 ಎಲ್ ಇಟಿ 2023**

**(ಸಂತೋಷ್ ಎಸ್. ಲಾಡ್)**
**ಕಾರ್ಮಿಕ ಸಚಿವರು**